ಸಿ.ಸಿ. ಸಂಃ 132/2019 ಪಿ.ಡಬ್ಲ್ಯು: 06

## ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿ ಸಿ ನಂ. **132/2019**

ದಿಃ **14-05-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ರಾಜೇಂದ್ರ ಪ್ರಸಾದ | ಸಿ.ಡಬ್ಲ್ಯೂ | **19** |
| ವಯಸ್ಸು | 59 ವರ್ಷ | ಪಿ.ಡಬ್ಲ್ಯು: | **06** |
| ತಂದೆಯ ಹೆಸರು | ಕುಂದನಲಾಲ್ | | |
| ವೃತ್ತಿ | ಲಾರಿ ಮಾಲೀಕ | | |
| ವಾಸಸ್ಥಳ | ಗುರ್ಗಾಂ, ದೆಹಲಿ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ಆರೋಪಿ ನಮ್ಮ ಡ್ರೈವರ್. 2018-19 ನೇ ಸಾಲಿನಲ್ಲಿ ಡ್ರೈವರ್ ನಿಂದ ತನಗೆ ಅಪಘಾತ ಆಗಿದೆ ಎಂದು ನನಗೆ ಕರೆ ಬಂದಿತು. ಅಪಘಾತ ನನ್ನಿಂದ ಆಗಿಲ್ಲ ಆದರೂ ನನ್ನನ್ನು ಪೊಲೀಸರು ಹಿಡಿದುಕೊಂಡಿದ್ದಾರೆ ಎಂದು ಡ್ರೈವರ್ ನನಗೆ ತಿಳಿಸಿದರು. ದಿನಾಂಕ 02.12.2018 ರ ಕಲಂ 133 ರ ಮೋಟರ್ ವಾಹನ ಕಾಯಿದೆ ನೋಟೀಸ್ ದಾಖಲಾತಿಯನ್ನು ಸಾಕ್ಷಿಯು ಗುರುತಿಸಿದ್ದು. ಸದರಿ ನೋಟೀಸ್ ಅನ್ನು ನಿಪಿ-**14** ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**14** ಎ ಎಂದು ಗುರುತಿಸಲಾಯಿತು. ದಿನಾಂಕ 03.12.2018 ರ ಮರುತ್ತರ ನೋಟೀಸ್ ಅನ್ನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ಮರುತ್ತರ ನೋಟೀಸ್ ಅನ್ನು ನಿಪಿ-**15** ಎಂದು ಗುರುತಿಸಲಾಯಿತು. ದಿನಾಂಕ 03.12.2018 ರ ವಾಹನ ಬಿಡುಗಡೆ ಕರಾರು ಪತ್ರವನ್ನು ಲಾರಿಯನ್ನು ಬಿಡಿಸಿಕೊಂಡು ಹೋಗುವ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ಸದರಿ ವಾಹನ ಬಿಡುಗಡೆ ಪತ್ರವನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ-**16** ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**16** ಎ ಹಾಗೂ ನಿಪಿ-**16** ಬಿ ಎಂದು ಗುರುತಿಸಲಾಯಿತು. ಈಗ ತೋರಿಸಲಾದ ಪೊಟೋಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿಪಿ-**17** ಎ ರಿಂದ **17** ಡಿ ಎಂದು ಗುರುತಿಸಲಾಯಿತು. ಸದರಿ ಲಾರಿ ನಂ. ಆರ್.ಜೆ 32 ಜಿಸಿ 1224. ನಿಪಿ-16 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನಿಮಗೆ ವಾಹನ ಬೇಕು ಎಂದರೆ ಸಹಿ ಮಾಡಿ ಎಂದರು ನಾನು ಸಹಿ ಮಾಡಿದೆ ಎಂದು ನುಡಿಯುತ್ತಾರೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**.)**

ನಾನು ಲಾರಿ ಮಾಲೀಕನಾಗಿರುತ್ತೇನೆ. ದಿನಾಂಕ 01.02.2018 ರ ಫಿರ್ಯಾದುದಾರರು ಶ್ರೀಮತಿ ಶಾರದಮ್ಮರವರ ಗಂಡನಾದ ಕೃಷ್ಣಪ್ಪರವರು ಠಾಣೆಗೆ ಹಾಜರಾಗಿ ದೂರು ನೀಡಿರುವುದು ನಿಜ. ಸಾಕ್ಷಿಯು ಮುಂದುವರೆದು ನಮ್ಮ ವಾಹನದಿಂದ ಯಾವುದೇ ಅಪಘಾತವಾಗಿಲ್ಲವೆಂದು ನುಡಿಯುತ್ತಾರೆ. ನಮ್ಮ ವಾಹನ ಚಾಲಕನ ಅತೀವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿಲ್ಲ. ಲಾರಿ ನಂ. ಆರ್.ಜೆ 32 ಜಿಸಿ 1224 ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ದ್ವಿಚಕ್ರ ಸಂಖ್ಯೆ ನಂ. ಕೆಎ 40 ಕೆ 7422 ವಾಹನಕ್ಕೆ ಡಿಕ್ಕಿ ಹೊಡೆದಿದ್ದೀರಿ ಎಂದು ಕೇಳಿದಾಗ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ದೆಸೆಯಿಂದ ಕೃಷ್ಣಪ್ಪನ ತಲೆಗೆ, ಎದೆಗೆ ಮತ್ತು ಬೆನ್ನಿಗೆ ತೀವ್ರವಾದ ಗಾಯಗಳಾಗಿದೆ ಎಂದು ಕೇಳಿದಾಗ ಸಾಕ್ಷಿಯು ಪೊಲೀಸರು ಆ ವಿಚಾರ ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಪೊಲೀಸರ ನೋಟೀಸಿಗೆ ನಾವು ಮರುತ್ತರ ನೀಡಿ ಅದರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ, ಪೊಲೀಸರು ಸಹಿ ಮಾಡಿ ಎಂದು ಹೇಳಿದರು ನಾನು ಸಹಿ ಮಾಡಿದೆ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 03.12.2018 ರ ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ನಿರಾಕರಿಸಿದ್ದು, ಸದರಿ ದಾಖಲೆಯನ್ನು ನಿಪಿ-**18** ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ಸಾಕ್ಷಿಗೆ ಓದಿ ಹೇಳಲಾಗಿ, ದಿನಾಂಕ 01.12.2018 ರ ಆರ್.ಜೆ 32 ಜಿಸಿ 1224 ಲಾರಿಯನ್ನು ಅದರ ಚಾಲಕ ಆಂಧ್ರಪ್ರದೇಶದಿಂದ ಹಿಂದೂಪುರದ ಬಳಿ ಇರುವ ಸ್ಪಿನಿಂಗ್ ಮಿಲ್ ನಿಂದ ಮಾಲ್ ಅನ್ನು ತೆಗೆದುಕೊಂಡು ಮುಂಬೈಗೆ ಹೋಗಲು ಮಾಲ್ ತಯಾರಿತ್ತು ಎಂದರೆ ಸರಿ.

ಗೌರಿಬಿದನೂರು ಬೈರೇನಹಳ್ಳಿ ಮಧುಗಿರಿ ರಸ್ತೆಯಲ್ಲಿ ಹೋಗಲು ಬರುತ್ತಿದ್ದಾಗ ಚಿಕ್ಕಕುರುಗೋಡು ಗ್ರಾಮದ ಬಳಿ ಲಾರಿಯನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರುಗಡೆ ಬರುತ್ತಿದ್ದ ಕೆಎ 40 ಕೆ 7422 ಎಕ್ಸ್.ಎಲ್ ದ್ವಿಚಕ್ರ ವಾಹನಕ್ಕೆ ಅಪಘಾತವನ್ನು ಉಂಟು ಮಾಡಿದ ಪರಿಣಾಮ..........ನಿನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ-**18** ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಆರ್ ರವರಿಂದಃ

ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ. ನಮ್ಮ ವಾಹನ ಚಾಲಕ ನಮಗೆ ಫೋನ್ ಮಾಡಿ ಯಾವುದೇ ಅಪಘಾತ ಆಗಿಲ್ಲವೆಂದು ಹೇಳಿದ.

ನಮ್ಮ ಚಾಲಕನಿಂದ ಯಾವುದೇ ತಪ್ಪು ನಡೆದಿಲ್ಲ. ನಿಪಿ-14, 15 ಮತ್ತು 16 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ.

ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸ. ಇದೆ**

ಸಹಿ/-
ಹೆ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು